ನಾಗಮಾರಪಲ್ಲಿಯವರೆ ಪ್ರಶ್ನೆ ಕೇಳಿ. (ಗೊಂದಲ) ನೀವು ಕುಳಿತುಕೊಳ್ಳಿ. Question Hour ನಲ್ಲಿ ಒಂದೇ ಪ್ರಶ್ನೆಗೆ ಎಲ್ಲರೂ ಪ್ರಶ್ನೆ ಕೇಳುವುದಕ್ಕಾಗುವುದಿಲ್ಲ. (ಗೊಂದಲ) ಅವರು ಬೇಕಾದರೆ ಬೇರೆ ರೂಪದಲ್ಲಿ ಚರ್ಚೆಗೆ notice ಕಳುಹಿಸಿಕೊಡಲಿ. ನಾನು discussion ಗೆ allow ಮಾಡುತ್ತೇನೆ. Question Hour ನಲ್ಲಿ detail ಆಗಿ discussion ಮಾಡುವುದಕ್ಕಾಗುವುದಿಲ್ಲ. ಅವರು ಏನು ಪ್ರಶ್ನೆ ಕೇಳಿದ್ದಾರೋ ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಮತ್ತೆ detail ಆಗಿ ಕೇಳಿದಾಗ ಕರೆದು ಮಾತನಾಡಿ ಎಂದು ಹೇಳಿದ್ದೇನೆ. (ಗೊಂದಲ) ಶರಣ ಪ್ರಕಾಶ್ ರವರೆ ಕುಳಿತುಕೊಳ್ಳಿ. please ಕುಳಿತುಕೊಳ್ಳಿ. ಸಾಕಿನ್ನು. (ಗೊಂದಲ) It is too much. ಕುಳಿತುಕೊಳ್ಳಿ. (ಗೊಂದಲ) ಆಯಿತು ಬಿಡಿ. (ಗೊಂದಲ) ಗುರುಪಾದಪ್ಪ ನಾಗಮಾರಪಲ್ಲಿಯವರ ಪ್ರಶ್ನೆಗೆ ಸಂಬಂಧಿಸಿದಂತೆ, ವಕ್ಫ್ ಸಚಿವರೆ, next week ನಲ್ಲಿ 28, 29ನೇ ತಾರೀಖಿನಂದು ಉತ್ತರ ತರಿಸಿಕೊಡಬೇಕು. Session ಮುಗಿಯುತ್ತದೆ. Next week ನಲ್ಲಿ ನೀವು ಉತ್ತರ ಕೊಡಬೇಕು. ಉತ್ತರವನ್ನು ತಕ್ಷಣ ready ಮಾಡಿಕೊಡಿ. next ಸೋಮವಾರ, ಮಂಗಳವಾರ ನೀವು ಕೊಡಲೇಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಸೋಮವಾರ ಕೊಡುತ್ತೀರಾ? Assembly ಆದ ಮೇಲೆ ಕೊಡುತ್ತೀರಾ?

ಅಧ್ಯಕ್ಷರು: ಅದಕ್ಕಿಂತ ಮುಂಚೆ ಕೊಡುತ್ತಾರೆ.

ಶ್ರೀ ಮುಮ್ತಾಜ್ ಅಲಿಖಾನ್: ಮಾನ್ಯ ಅಧ್ಯಕ್ಷರೆ, ಮುಂದಿನ ಪ್ರಶ್ನೋತ್ತರದ ದಿವಸ ಕೊಡುವುದಕ್ಕೆ ಪ್ರಯತ್ನಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮುಂದಿನ ಪ್ರಶ್ನೋತ್ತರದ ದಿವಸ ಕೊಡುತ್ತೇನೆಂದು ಹೇಳುತ್ತಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

211 ಶ್ರೀ ಶ್ರೀನಿವಾಸ್ ಎಂ. :– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಆಯುರ್ವೇದ ಆರೋಗ್ಯ ಕೇಂದ್ರಗಳು ಹಾಗೂ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

(ಆ) ಅವುಗಳಲ್ಲಿ ಎಷ್ಟು ಆಸ್ಪತ್ರೆ ಮತ್ತು ಆರೋಗ್ಯ ಕೇಂದ್ರಗಳು ಸ್ವಂತ ಕಟ್ಟಡ ಮತ್ತಿತರ ಮೂಲಭೂತ ಸೌಕರ್ಯಗಳನ್ನು ಹೊಂದಿವೆ; ಈ ಸೌಲಭ್ಯಗಳು ಇಲ್ಲದ ಆಸ್ಪತ್ರೆಗಳಿಗೆ ಯಾವ ವ್ಯವಸ್ಥೆಗಳನ್ನು ಒದಗಿಸಿ ಕೊಡಲಾಗುವುದು;

(ಇ) ಆಯುರ್ವೇದ ಆಸ್ಪತ್ರೆಗಳಿಗೆ ವೈದ್ಯ ಮತ್ತು ಇತರೆ ಸಿಬ್ಬಂದಿಗಳನ್ನು ಸಮರ್ಪಕ ರೀತಿಯಲ್ಲಿ ಒದಗಿಸಿ ಕೊಡುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

(ಅ) ರಾಜ್ಯದಲ್ಲಿ ಒಟ್ಟು 561 ಆಯುರ್ವೇದ ಚಿಕಿತ್ಸಾಲಯಗಳು, 76 ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ.

(ಜಿಲ್ಲಾವಾರು ಮಾಹಿತಿಯ ಪ್ರತಿಯನ್ನು ಲಗತ್ತಿಸಿದೆ)

(ಆ) 561 ಆಯುರ್ವೇದ ಚಿಕಿತ್ಸಾಲಯಗಳು ಮತ್ತು 76 ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ, ಒಟ್ಟು 637 ಸಂಸ್ಥೆಗಳಲ್ಲಿ 460 ಸ್ವಂತ ಕಟ್ಟಡ, 169 ದಾನಿಗಳು ಹಾಗೂ ಸಂಘ ಸಂಸ್ಥೆಗಳು ನೀಡಿರುವ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, 08 ಸಂಸ್ಥೆಗಳಿಗೆ ಬಾಡಿಗೆ ವ್ಯವಸ್ಥೆ ಮಾಡಲಾಗಿದೆ. ಪ್ರತಿ ವರ್ಷ ಅನುದಾನವನ್ನು ಅವಕಾಶ ಮಾಡಿಕೊಂಡು ಸ್ವಂತ ಕಟ್ಟಡದ ವ್ಯವಸ್ಥೆ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ 2008–09ನೇ ಸಾಲಿನಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಜಿಲ್ಲಾ ವಲಯದಲ್ಲಿ ರೂ. 326.67 ಲಕ್ಷ ಆಯವ್ಯಯ ಒದಗಿಸಿಕೊಳ್ಳಲಾಗಿದೆ.

(ಇ) ರಾಜ್ಯ ಸರ್ಕಾರವು ಗ್ರಾಮಾಂತರ ಪ್ರದೇಶಗಳಲ್ಲಿರುವ ಆಯುರ್ವೇದ ಚಿಕಿತ್ಸಾಲಯಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ದಿನಾಂಕ: 31/05/2005ರ ಪತ್ರದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಿದ್ದು, ಅದರಂತೆ ಗುತ್ತಿಗೆ ಆಧಾರದ ಮೇರೆಗೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದ ವೈದ್ಯರುಗಳ ಸೇವೆಯನ್ನು ಕ್ರಮವಾಗಿ 2004ನೇ ಸಾಲಿನಲ್ಲಿ 77, 2006ನೇ ಸಾಲಿನಲ್ಲಿ 74 ಮತ್ತು 2008ನೇ ಸಾಲಿನಲ್ಲಿ 55 ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಿ ಕ್ರಮಬದ್ಧಗೊಳಿಸುವ ಮೂಲಕ ಸದರಿ ಚಿಕಿತ್ಸಾಲಯಗಳಿಗೆ ವೈದ್ಯರುಗಳ ಸೇವೆಯನ್ನು ಸಮರ್ಪಕವಾಗಿ ಒದಗಿಸಲಾಗುತ್ತಿದೆ. ಇದಲ್ಲದೆ 82 ಗುತ್ತಿಗೆ ವೈದ್ಯರು ಸಂಚಿತ ವೇತನದ ಆಧಾರದ ಮೇಲೆ ಚಿಕಿತ್ಸಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಮಂಜೂರಾತಿಯಾದ ಹಿರಿಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿ ಮಾಡಿ ನೇಮಿಸುವ ಮೂಲಕ ವೈದ್ಯರ ಸೇವೆಯನ್ನು ಸಮರ್ಪಕವಾಗಿ ಒದಗಿಸಲಾಗುತ್ತಿದೆ.

ಇತರೆ ಸಿಬ್ಬಂದಿಗಳನ್ನು ನಿಯೋಜನೆ/ನೇಮಕಾತಿ/ಪದೋನ್ನತಿ ಮೂಲಕ ಭರ್ತಿ ಮಾಡಿ ಸೇವೆಗಳನ್ನು ಒದಗಿಸಲಾಗುತ್ತಿದೆ.

ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಆಯುರ್ವೇದ ಪಂಚಕರ್ಮ ವಿಭಾಗಗಳಿಗೆ ತಲಾ 12 ವೈದ್ಯರುಗಳು, 12 ಔಷಧ ವಿತರಕರು ಹಾಗೂ 12 ಗ್ರೂಪ್-ಡಿ ಹುದ್ದೆಗಳು ಮಂಜೂರಾಗಿದ್ದು, ಇದರಲ್ಲಿ ವೈದ್ಯರುಗಳನ್ನು ಈಗಾಗಲೇ ಭರ್ತಿ ಮಾಡಲಾಗಿದೆ. ಉಳಿದ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ರಾಜ್ಯದಲ್ಲಿರುವ ಆಯುಷ್ ಇಲಾಖೆಯ ಆಯುರ್ವೇದ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳ ಜಿಲ್ಲಾವಾರು ವಿವರ

ಕ್ರಮ ಸಂಖ್ಯೆ	ಜಿಲ್ಲೆ	ಚಿಕಿತ್ಸಾಲಯಗಳ ಸಂಖ್ಯೆ	ಆಸ್ಪತ್ರೆಗಳ ಸಂಖ್ಯೆ
1	ಬೆಂಗಳೂರು (ನಗರ)	10	2
2	ಬೆಂಗಳೂರು (ಗ್ರಾ)	13	3
3	ಕೋಲಾರ	9	2
4	ತುಮಕೂರು	25	4
5	ಶಿವಮೊಗ್ಗ	34	1
6	ಚಿತ್ರದುರ್ಗ	33	3
7	ದಾವಣಗೆರೆ	31	1
8	ಮೈಸೂರು	30	5
9	ಚಾಮರಾಜನಗರ	10	2
10	ಹಾಸನ	52	4
11	ಮಂಡ್ಯ	20	4
12	ಕೊಡಗು	8	2

13	ಚಿಕ್ಕಮಗಳೂರು	39	4
14	ಉಡುಪಿ	14	–
15	ದಕ್ಷಿಣ ಕನ್ನಡ	4	2
16	ಬೆಳಗಾಂ	24	5
17	ಧಾರವಾಡ	11	1
18	ಗದಗ	17	2
19	ಹಾವೇರಿ	9	2
20	ಬಿಜಾಪುರ	12	1
21	ಬಾಗಲಕೋಟೆ	15	3
22	ಉತ್ತರ ಕನ್ನಡ	12	3
23	ಗುಲ್ಬರ್ಗಾ	24	8
24	ರಾಯಚೂರು	12	1
25	ಕೊಪ್ಪಳ	13	3
26	ಬೀದರ್	16	2
27	ಬಳ್ಳಾರಿ	64	6
	ಒಟ್ಟು	**561**	**76**

(ಎನ್. ಮಹಾಲಕ್ಷ್ಮಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಪ್ರಶ್ನೆ ಸಂಖ್ಯೆ 46 (211)
(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಎಂ. ಶ್ರೀನಿವಾಸ್: ಮಂಡ್ಯ ಜಿಲ್ಲೆಯಲ್ಲಿ 4 ಆಸ್ಪತ್ರೆಗಳ ಸಂಖ್ಯೆಯನ್ನು ಹೇಳಿದ್ದಾರೆ. ಜೊತೆಗೆ, ಮಂಡ್ಯ ನಗರದಲ್ಲಿರುವ ಕೇಂದ್ರ ಭಾಗದಲ್ಲಿ ಜಾಗವನ್ನು ಕೊಟ್ಟಿದ್ದರೂ ಆಸ್ಪತ್ರೆಯನ್ನು ಕಟ್ಟಿಸದಿರಲು ಕಾರಣವೇನು? ಎನ್ನುವ ಬಗ್ಗೆ ತಿಳಿಸಬೇಕು. ಮಂಡ್ಯ ನಗರದಲ್ಲಿ ಜಾಗವನ್ನು ಕೊಟ್ಟಿದ್ದೇವೆ. ಎಲ್ಲ ವ್ಯವಸ್ಥೆ, ಹಣದ ವ್ಯವಸ್ಥೆ ಇದ್ದರೂ, ಇದುವರೆಗೆ ಆಸ್ಪತ್ರೆ ಕಟ್ಟಡ ಪ್ರಾರಂಭಿಸದಿರಲು ಕಾರಣವೇನು?

ಶ್ರೀ ಬಿ. ಶ್ರೀರಾಮುಲು: ರಾಜ್ಯದಲ್ಲಿ ಒಟ್ಟು 561 ಆಯುರ್ವೇದ ಚಿಕಿತ್ಸಾಲಯಗಳಿದ್ದು, 79 ತಾಲ್ಲೂಕುಗಳಲ್ಲಿನ ಆಸ್ಪತ್ರೆಗಳಲ್ಲಿ ಒಟ್ಟು 639 ಸಂಘಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಜೊತೆಗೆ, 460 ಆಸ್ಪತ್ರೆಗಳು ಕಟ್ಟಡ ಹೊಂದಿರುತ್ತವೆ. ಅದರಲ್ಲಿ 169 ದಾನಿಗಳಿಂದ, ಸಂಘಸಂಸ್ಥೆಗಳಿಂದ ನೀಡಲಾಗಿದೆ. 2008–09ನೇ ಸಾಲಿನಲ್ಲಿ ಮೂಲಭೂತ ಸೌಲಭ್ಯ ಒದಗಿಸಲು ಸುಮಾರು 3 ಕೋಟಿ 26 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಜೊತೆಗೆ, ತಾಲ್ಲೂಕು ಮಟ್ಟದ ಆಸ್ಪತ್ರೆಗಳು, ಜೊತೆಯಲ್ಲಿ ಖಾಲಿ ಇದ್ದ ಹುದ್ದೆಗಳನ್ನು ಜಿಲ್ಲಾಧಿಕಾರಿ ವ್ಯಾಪ್ತಿಯಲ್ಲಿ ಒಂದು ಸಭೆ ನಡೆಸಿ ಎಲ್ಲೆಲ್ಲಿ ಹುದ್ದೆಗಳು ಖಾಲಿ ಇವೆ ಅದನ್ನು ಒದಗಿಸಿಕೊಡಬೇಕೆಂದು ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಎಂ. ಶ್ರೀನಿವಾಸ್: ಮಂಡ್ಯ ನಗರದ ಆಯುರ್ವೇದ ಆಸ್ಪತ್ರೆ ಕಟ್ಟಡ ಜಾಗ ಕೊಟ್ಟಿದ್ದರೂ ಸಹ ಇದುವರೆಗೆ ಕಟ್ಟಡವನ್ನು ಪ್ರಾರಂಭಿಸಿಲ್ಲ. ಅದಕ್ಕೆ ಕಾರಣವೇನೆಂದು ಹೇಳಬೇಕು.

ಶ್ರೀ ಬಿ. ಶ್ರೀರಾಮುಲು: ಮಂಡ್ಯಕ್ಕೆ ಸಂಬಂಧಪಟ್ಟಂತೆ ಕಟ್ಟಡದ ಬಗ್ಗೆ ಸಂಪೂರ್ಣವಾಗಿ ಮಾಹಿತಿ ಇಲ್ಲ. ರಾಜ್ಯದ ಬಗ್ಗೆ ಮಾಹಿತಿ ಕೊಡಲಾಗಿದೆ. ಅದಷ್ಟು ಬೇಗ ಮಂಡ್ಯದ ಬಗ್ಗೆ ವರದಿ ತರಿಸಿಕೊಂಡು ತಮಗೆ ತಲುಪಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ. ಶ್ರೀನಿವಾಸ್: ಜಿಲ್ಲಾ ಆಸ್ಪತ್ರೆಗಳಿಗೆ 12 ಜನ ವೈದ್ಯರು, 12 ಜನ ಔಷಧಿ ವಿತರಕರು ಹಾಗೂ 12 ಗ್ರೂಪ್ ಡಿ ಹುದ್ದೆಗಳು ಮಂಜೂರು ಆಗಿದ್ದರೂ ಸಹ ಮಂಡ್ಯ ಸರಕಾರಿ ಆಸ್ಪತ್ರೆಯಲ್ಲಿ ಡಾಕ್ಟರುಗಳಿಲ್ಲದಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ವೈದ್ಯರನ್ನು appoint ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶ್ರೀರಾಮುಲು: already ಸರ್ಕಾರದಲ್ಲಿ ತೀರ್ಮಾನ ತೆಗೆದುಕೊಂಡು ಆದಷ್ಟು ಬೇಗನೆ 815 ವೈದ್ಯರನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಗಿದೆ. ಸರ್ಕಾರದ ಆದೇಶದ ಮೇರೆಗೆ 2007ರಲ್ಲಿ, 22–01–2008ರಲ್ಲಿ ಆಯುಷ್ ಇಲಾಖೆಯ ವೈದ್ಯರಿಗೆ ಸುಮಾರು 6000 ರು. ವೇತನವನ್ನೇನು ಕೊಡುತ್ತಿದ್ದರು ಅದು ಸುಮಾರು 13000 ರೂ.ಗಳಿಗೆ ಹೆಚ್ಚಳ ಆಗಿದೆ.